# ಅಧ್ಯಾಯ-VI
# ಖನಿಜ ಸ್ವೀಕೃತಿಗಳು

## 6.1 ತೆರಿಗೆ ನಿರ್ವಹಣೆ

ಖನಿಜ ಸಂಪನ್ಮೂಲಗಳ ನಿರ್ವಹಣೆಯ ಜವಾಬ್ದಾರಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ [1] ನಡುವೆ ಹಂಚಿಕೊಳ್ಳಲ್ಪಡುತ್ತದೆ. ಕೇಂದ್ರ ಸರ್ಕಾರವು ಜಾರಿಗೊಳಿಸಿರುವಂತಹ ಗಣಿಗಳು ಮತ್ತು ಖನಿಜಗಳು (ವಿಕಸನ ಮತ್ತು ನಿಯಂತ್ರಣ) ಅಧಿನಿಯಮ, 1957, ಖನಿಜಗಳ [2] ನಿಯಂತ್ರಣ ಮತ್ತು ವಿಕಸನಕ್ಕಾಗಿ ಕಾನೂನಾತ್ಮಕ ಚೌಕಟ್ಟನ್ನು ನಿರ್ದಿಷ್ಟಪಡಿಸುತ್ತವೆ. ಖನಿಜಗಳ ಸಂರಕ್ಷಣೆ ಹಾಗೂ ವ್ಯವಸ್ಥಿತ ವಿಕಸನಕ್ಕಾಗಿ ಹಾಗೂ ಪರ್ಮಿಟ್ಟುಗಳು, ಪರವಾನಿಗೆಗಳು ಮತ್ತು ಗುತ್ತಿಗೆಗಳನ್ನು ನಿಯಂತ್ರಿಸುವುದಕ್ಕಾಗಿ ಖನಿಜ ರಿಯಾಯಿತಿ ನಿಯಮಗಳು, 1960, ಖನಿಜ ಸಂರಕ್ಷಣೆ ಮತ್ತು ವಿಕಸನ ನಿಯಮಳು, 1988, ಹಾಗೂ ಗ್ರಾನೈಟು ಸಂರಕ್ಷಣೆ ಮತ್ತು ವಿಕಸನ ನಿಯಮಗಳು, 1999, ಇವುಗಳನ್ನು ರೂಪಿಸಲಾಗಿದೆ.

ಅಪ್ರಧಾನ ಖನಿಜಗಳನ್ನು ಹೊರತೆಗೆಯುವ/ಉಪಯೋಗಕ್ಕೆ ಬರುವಂತೆ ಮಾಡುವುದಕ್ಕೆ ಸಂಬಂಧಿತ ಕಾನೂನನ್ನು ರೂಪಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಲಾಗಿದೆ. ಅದರಂತೆಯೇ, ರಾಜ್ಯ ಸರ್ಕಾರವು ಕರ್ನಾಟಕ ಅಪ್ರಧಾನ ಖನಿಜ ರಿಯಾಯಿತಿ ನಿಯಮಗಳು, 1994ನ್ನು ರೂಪಿಸಿದೆ.

## 6.2 ಆಂತರಿಕ ಲೆಕ್ಕಪರಿಶೋಧನೆ

ಇಲಾಖೆಯಲ್ಲಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗವು 1985ರಿಂದ ಕಾರ್ಯನಿರ್ವಹಿಸುತ್ತಿದೆ. ಅದು ರಾಜ್ಯ ಲೆಕ್ಕಪತ್ರಗಳ ಇಲಾಖೆಯಿಂದ ನಿಯೋಜನೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಓರ್ವ ಲೆಕ್ಕಾಧಿಕಾರಿಗಳ ನೇತೃತ್ವದಲ್ಲಿ ಹಾಗೂ ನಿರ್ದೇಶಕರವರ ಒಟ್ಟಾರೆ ನಿಯಂತ್ರಣದಲ್ಲಿದೆ.

ಇಲಾಖೆಯು ಒದಗಿಸಿರುವ ಮಾಹಿತಿಯಂತೆ, 2015–16ರಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಲು ಬಾಧ್ಯವಾಗಿದ್ದಂತಹ 31 ಕಚೇರಿಗಳ ಪೈಕಿ ಯಾವುದೇ ಕಚೇರಿಯನ್ನೂ ಲೆಕ್ಕಪರಿಶೋಧನೆಗೆ ಒಳಪಡಿಸಿರಲಿಲ್ಲ. ಕಚೇರಿಗಳನ್ನು ಲೆಕ್ಕಪರಿಶೋಧನೆಗೆ ವ್ಯಾಪಿಸುವಲ್ಲಿನ ಕೊರತೆಗೆ ವಿಭಾಗದಲ್ಲಿನ ಸಿಬ್ಬಂದಿಯ ಕೊರತೆಯ ಕಾರಣವನ್ನು ನೀಡಲಾಗಿದ್ದಿತು. ಇಲಾಖೆಯು ಒದಗಿಸಿದ ಮಾಹಿತಿಯಂತೆ, ತೆರಿಗೆ ಮೊತ್ತದ ಪ್ರಭಾವದೊಂದಿಗೆ ಆಂತರಿಕ ಲೆಕ್ಕಪರಿಶೋಧನೆಯು ಗಮನಿಸಲಾಗಿದ್ದಂತಹ ಅಂಶಗಳ ಸಂಖ್ಯೆ, ಇತ್ಯರ್ಥಗೊಂಡವುಗಳು ಹಾಗೂ ಬಾಕಿಗಳ ವರ್ಷವಾರು ವಿವರಗಳು **ಕೋಷ್ಟಕ 6.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 6.1**
**ಆಂತರಿಕ ಲೆಕ್ಕಪರಿಶೋಧನೆಯು ಗಮನಿಸಲಾಗಿದ್ದಂತಹ ಅಂಶಗಳ ವರ್ಷವಾರು ವಿವರಗಳು**

**(₹ ಕೋಟಿಯಲ್ಲಿ)**

| ವರ್ಷ | ಗಮನಿಸಲಾಗಿದ್ದ ಅಂಶಗಳು | | ಇತ್ಯರ್ಥಗೊಳಿಸಲಾಗಿದ್ದ ಲೆಕ್ಕಪರಿಶೋಧನಾ ಅಂಶಗಳು | | ಬಾಕಿಯಿರುವ ಲೆಕ್ಕಪರಿಶೋಧನಾ ಅಂಶಗಳು | |
|---|---|---|---|---|---|---|
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| 2011-12ರ ವರೆಗೆ | 1,640 | 335.69 | 1,403 | 295.67 | 237 | 40.03 |
| 2012-13 | 02 | 1.48 | - | - | 02 | 1.48 |
| 2013-14 | 0 | - | - | - | - | - |
| 2014-15 | 02 | - | - | - | 02 | - |
| 2015-16 | 0 | - | - | - | - | - |
| **ಒಟ್ಟು** | **1,644** | **337.17** | **1,403** | **295.67** | **241** | **41.50** |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, 2011–12ರ ನಂತರ ಇಲಾಖೆಯಲ್ಲಿನ ಆಂತರಿಕ ಲೆಕ್ಕಪರಿಶೋಧನಾ ವಿಭಾಗದ ಕಾರ್ಯಚಟುವಟಿಕೆಗಳನ್ನು ಬಹಳಷ್ಟು ಮಟ್ಟಿಗೆ ಇಳಿಮುಖಗೊಳಿಸಲಾಗಿದ್ದಿತು ಹಾಗೂ ಹಿಂದಿನ ಎರಡು ವರ್ಷಗಳ ಅವಧಿಯಲ್ಲಿ ವಸ್ತುತ: ಶೂನ್ಯವಾಗಿದ್ದಿತು ಎಂಬುದು ಸುಸ್ಪಷ್ಟಗೊಳ್ಳುತ್ತದೆ. ಇದು, ಇಲಾಖೆಯು ಆಂತರಿಕ ಲೆಕ್ಕಪರಿಶೋಧನೆಗೆ ಅರ್ಹ ಪ್ರಾಮುಖ್ಯತೆಯನ್ನು ನೀಡುತ್ತಿಲ್ಲ ಎಂಬುದನ್ನು ಸೂಚಿಸುತ್ತದೆ.

ಅನ್ವಯಗೊಳ್ಳುವ ನಿಯಮ ನಿಬಂಧನೆಗಳು, ನಿಯಂತ್ರಣಗಳು ಹಾಗೂ ಅನುಮೋದಿತ ಕಾರ್ಯವಿಧಾನಗಳ ಜೊತೆ ಇಲಾಖೆಯ ಅನುಸರಣಾ ಕ್ರಮಗಳನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಆಂತರಿಕ ಲೆಕ್ಕಪರಿಶೋಧನೆಯು

[1] ಭಾರತದ ಸಂವಿಧಾನದ ಏಳನೆಯ ಷೆಡ್ಯೂಲಿನ ಕೇಂದ್ರದ ಪಟ್ಟಿಯ (ಪಟ್ಟಿ I) ದಾಖಲೆ ಸಂಖ್ಯೆ 54 ಹಾಗೂ ರಾಜ್ಯ ಪಟ್ಟಿಯ (ಪಟ್ಟಿ II) ದಾಖಲೆ ಸಂಖ್ಯೆ 23 ಮತ್ತು 50.

[2] ಪೆಟ್ರೋಲಿಯಂ ಹಾಗೂ ಪ್ರಾಕೃತಿಕ ಅನಿಲ ಹಾಗೂ ಪರಮಾಣು ಸಂಬಂಧಿತ ಖನಿಜಗಳನ್ನು ಹೊರತುಪಡಿಸಿದಂತೆ.

ಒಂದು ಪ್ರಮುಖ ವ್ಯವಸ್ಥೆಯಾಗಿರುವುದರಿಂದ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಬಲಪಡಿಸಲು ಅರ್ಹ ಪ್ರಾಮುಖ್ಯತೆಯನ್ನು ನೀಡಬೇಕೆಂಬುದಾಗಿ ಈ ಮೂಲಕ ಶಿಫಾರಸ್ಸು ಮಾಡಲಾಗುತ್ತಿದೆ.

## 6.3 ಲೆಕ್ಕಪರಿಶೋಧನೆಯ ಫಲಿತಾಂಶಗಳು

2015–16ರಲ್ಲಿ, ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ 17 ಕಚೇರಿಗಳ ದಾಖಲೆಗಳ ಪರೀಕ್ಷಾ–ಪರಿಶೀಲನೆಯು, 53 ಕಂಡಿಕೆಗಳ ಮೂಲಕ ₹ 271.95 ಕೋಟಿ ಮೊತ್ತವು ಒಳಗೊಂಡಂತೆ ಖನಿಜ ರವಾನೆ ಪರ್ಮಿಟ್ಟುಗಳನ್ನು ಹೊಂದಿರದೆಯೇ ಖನಿಜಗಳನ್ನು ಸಾಗಾಣಿಕೆ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು, ರಾಜಧನವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು, ಬಡ್ಡಿ/ನಿಷ್ಕ್ರಿಯ ಬಾಡಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು ಹಾಗೂ ಇನ್ನಿತರೆ ನಿಯಮಬಾಹಿರತೆಗಳನ್ನು ತೋರಿಸಿಕೊಟ್ಟಿತು, ಅವುಗಳು **ಕೋಷ್ಟಕ 6.2**ರಲ್ಲಿ ನೀಡಲಾಗಿರುವಂತಹ ಪ್ರವರ್ಗಗಳ ಅಡಿಯಲ್ಲಿ ಬರುತ್ತವೆ.

**ಕೋಷ್ಟಕ 6.2**
**ಲೆಕ್ಕಪರಿಶೋಧನೆಯ ಫಲಿತಾಂಶಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಪ್ರವರ್ಗ | ಕಂಡಿಕೆಗಳ ಸಂಖ್ಯೆ | ಮೊತ್ತ |
|---|---|---|---|
| 01. | ಖನಿಜ ರವಾನೆ ಪರ್ಮಿಟ್ಟುಗಳನ್ನು ಹೊಂದಿರದೆಯೇ ಖನಿಜಗಳನ್ನು ಸಾಗಾಣಿಕೆ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 14 | 244.54 |
| 02. | ರಾಜಧನವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 12 | 22.62 |
| 03. | ಬಡ್ಡಿ/ನಿಷ್ಕ್ರಿಯ ಬಾಡಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 12 | 0.26 |
| 04. | ಇತರೆ ನಿಯಮಬಾಹಿರತೆಗಳು | 15 | 4.53 |
| | **ಒಟ್ಟು** | **53** | **271.95** |

ಪ್ರಸಕ್ತ ಸಾಲಿನಲ್ಲಿ ಇಲಾಖೆಯು, ₹ 32.14 ಕೋಟಿ ಮೊತ್ತವು ಒಳಗೊಂಡಂತೆ 13 ಕಂಡಿಕೆಗಳಲ್ಲಿ ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸಿದ್ದಂತಹ ಕರನಿರ್ಧಾರಣೆಗಳನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು ಹಾಗೂ ಇನ್ನಿತರೆ ಲೋಪದೋಷಗಳನ್ನು ಒಪ್ಪಿಕೊಂಡಿತು ಹಾಗೂ ಎರಡು ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿದ್ದ ಪ್ರಕರಣಗಳಲ್ಲಿ ₹ 19.72 ಕೋಟಿ ಮೊತ್ತವನ್ನು ವಸೂಲಾತಿ ಮಾಡಿತು. ಹಿಂದಿನ ಸಾಲುಗಳಿಗೆ ಸಂಬಂಧಿಸಿದ್ದ ಒಂಬತ್ತು ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿದ್ದ ಪ್ರಕರಣಗಳಲ್ಲಿ ₹ 0.35 ಕೋಟಿ ಮೊತ್ತವನ್ನು ವಸೂಲಾತಿ ಮಾಡಲಾಗಿದ್ದಿತು.

₹ 264.72 ಕೋಟಿ ಮೊತ್ತವು ಒಳಗೊಂಡಂತೆ ಕೆಲವು ದೃಷ್ಟಾಂತ ಪ್ರಕರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ತಿಳಿಸಲಾಗಿದೆ.

## 6.4 ಖನಿಜ ರವಾನೆ ಪರ್ಮಿಟ್ಟುಗಳನ್ನು ಹೊಂದಿರದೆಯೇ ಖನಿಜಗಳನ್ನು ಸಾಗಾಣಿಕೆ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

ಕರ್ನಾಟಕ ಅಪ್ರಧಾನ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 42(1)ರ ಅನುಸಾರ, ಯಾವುದೇ ವ್ಯಕ್ತಿಯೂ ಯಾವುದೇ ಅಪ್ರಧಾನ ಖನಿಜಗಳನ್ನು ವಿದ್ಯುನ್ಮಾನ ನಮೂನೆಯಲ್ಲಿ (ಇ–ಪರ್ಮಿಟ್ಟು ಅಥವಾ ಎಂ–ಪರ್ಮಿಟ್ಟು) ಹೊರತೆಗೆದಂತಹ ಒಂದು ಗಣಕೀಕೃತ ಖನಿಜ ರವಾನೆ ಪರ್ಮಿಟ್ಟಿನ ಅಡಿಯಲ್ಲಿ ಅಥವಾ ಅದರ ಅನುಸಾರವಾಗಿಯಲ್ಲದೇ ಅನ್ಯಥಾ ರೀತಿಯಲ್ಲಿ ಸಾಗಣೆ ಮಾಡುವಂತಿಲ್ಲ ಅಥವಾ ಸಾಗಣೆ ಮಾಡಲು ಕಾರಣವಾಗುವಂತಿಲ್ಲ. ಅಲ್ಲದೆಯೇ, ಕಲ್ಲುಗಣಿಗಾರಿಕೆ ಗುತ್ತಿಗೆ ಒಡಂಬಡಿಕೆಯ ಭಾಗ-Vರ ಷರತ್ತು ಸಂಖ್ಯೆ-4ರ ಅನುಸಾರ, ಗುತ್ತಿಗೆಯನ್ನು ಹೊಂದಿರುವವರು ಖನಿಜ ರವಾನೆ ಪರ್ಮಿಟ್ಟುಗಳನ್ನು ಪಡೆಯದೆಯೇ ಅಪ್ರಧಾನ ಖನಿಜಗಳನ್ನು ಸಾಗಾಣಿಕೆ ಮಾಡಿದ್ದಕ್ಕಾಗಿ ರಾಜಧನದ ಐದು ಪಟ್ಟು ದಂಡವನ್ನು ಪಾವತಿಸಲು ಬಾಧ್ಯರಾಗಿರುತ್ತಾರೆ.

ಗುತ್ತಿಗೆ ಪ್ರದೇಶದಲ್ಲಿ ಮಾಹಿತಿ ತಂತ್ರಜ್ಞಾನದ ಮೂಲಭೂತ ಸೌಕರ್ಯವನ್ನು ಹೊಂದಿರದ ಅಪ್ರಧಾನ ಖನಿಜ ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿರುವವರಿಗೆ ಕಾರ್ಯಾಚರಣೆಗಳನ್ನು ಸುಲಭಗೊಳಿಸುವುದಕ್ಕಾಗಿ, ಎಸ್ಎಂಎಸ್ ಆಧಾರಿತ ಟ್ರಿಪ್ಪು ಹಾಳೆ ಅನುಕೂಲತೆಯನ್ನು ಜನವರಿ 2012ರಿಂದ ಜಾರಿಗೆ ಬರುವಂತೆ "ಸಮಗ್ರ ಗುತ್ತಿಗೆ ನಿರ್ವಹಣಾ ವ್ಯವಸ್ಥೆಯನ್ನು" ಪ್ರಾರಂಭಿಸಲಾಯಿತು. ಆದಾಗ್ಯೂ, ಕೆಲವು ತಾಂತ್ರಿಕ ಕಾರಣಗಳಿಂದ ಎಂ–ಪರ್ಮಿಟ್ಟಿನ ಅನುಕೂಲತೆಯನ್ನು ಫೆಬ್ರವರಿ 2015ರಿಂದ ಸ್ಥಗಿತಗೊಳಿಸಲಾಯಿತು.

ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ಏಳು[3] ಉಪ ನಿರ್ದೇಶಕರುಗಳ ಹಾಗೂ ಏಳು[4] ಹಿರಿಯ ಭೂವಿಜ್ಞಾನಿಗಳ ಕಚೇರಿಗಳ ದಾಖಲೆಗಳನ್ನು ಜನವರಿ ಮತ್ತು ಮಾರ್ಚ್ 2016ರ ಅವಧಿಯಲ್ಲಿ ಪರೀಕ್ಷಾ–

[3] ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ದಕ್ಷಿಣ ಕನ್ನಡ, ಹೊಸಪೇಟೆ, ಕಲಬುರಗಿ ಹಾಗೂ ತುಮಕೂರು.

[4] ಬಳ್ಳಾರಿ, ಬೆಂಗಳೂರು (ನಗರ), ಹಾವೇರಿ, ಕೋಲಾರ, ಕೊಪ್ಪಳ, ಮಂಡ್ಯ ಹಾಗೂ ಶಿವಮೊಗ್ಗ.

ಪರಿಶೀಲನೆ ಮಾಡುವ ವೇಳೆಯಲ್ಲಿ, 2011–12ರಿಂದ 2014–15 ಸಾಲುಗಳಲ್ಲಿ 1,34,61,612.5 ಮೆಟ್ರಿಕ್ ಟನ್ನುಗಳಷ್ಟು ಕಟ್ಟಡ ಕಲ್ಲು, 15,425 ಮೆಟ್ರಿಕ್ ಟನ್ನುಗಳಷ್ಟು ಮುರ್ರಂ, 17,353 ಮೆಟ್ರಿಕ್ ಟನ್ನುಗಳಷ್ಟು ದಟ್ಟಣೆ ಮಣ್ಣು, 232.357 ಘನ ಮೀಟರುಗಳಷ್ಟು ಬೂದು ಗ್ರಾನೈಟು ಕಲ್ಲು ಹಾಗೂ 4,40,449 ಚದರ ಮೀಟರುಗಳಷ್ಟು ಶಹಬಾದಿ ಕಲ್ಲುಗಳನ್ನು ಖನಿಜ ರವಾನೆ ಪರ್ಮಿಟ್ಟುಗಳನ್ನು ಪಡೆಯದೆಯೇ ಸಾಗಣೆ ಮಾಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಗುತ್ತಿಗೆ ಒಡಂಬಡಿಕೆಯ ಅನುವುಗಳ ಅಡಿಯಲ್ಲಿ ಅಗತ್ಯವಿದ್ದಂತೆ ಅಂತಹ ಸಾಗಾಣಿಕೆಗೆ ರಾಜಧನದ ಐದು ಪಟ್ಟನ್ನು ದಂಡದ ಮೊತ್ತವಾಗಿ ವಿಧಿಸಿರಲಿಲ್ಲ. ತತ್ಪರಿಣಾಮವಾಗಿ ದಂಡವನ್ನು ವಿಧಿಸದಿದ್ದುದು ₹ 244.58 ಕೋಟಿ ಆಗಿದ್ದಿತು.

ಹಿಂದಿನ ಸಾಲುಗಳಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ ಲೋಪದೋಷಗಳ ಕಾರಣ, ಇಲಾಖೆಯು ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳ ನಿಯಮ 42(1)ರ ಅನುವುಗಳು ನಿರ್ದಿಷ್ಟಪಡಿಸಿರದ ಅಪ್ರಧಾನ ಖನಿಜಗಳಿಗೆ ಅನ್ವಯಗೊಳ್ಳುವುದಿಲ್ಲ ಹಾಗೂ ತನ್ನ ವಾರ್ಷಿಕ ನಿರ್ಧಾರಣೆಯ ಸಮಯದಲ್ಲಿ ಕಲ್ಲುಗಣಿಗಾರಿಕೆ ಗುತ್ತಿಗೆಗಳ ಹೊಂಡಗಳ ಅಳತೆಯ ವೈಜ್ಞಾನಿಕ ಪದ್ಧತಿಯು ಅಪ್ರಧಾನ ಖನಿಜಗಳ ಉತ್ಪಾದನೆಯ ಪರಿಮಾಣವನ್ನು ಪತ್ತೆಹಚ್ಚುವುದಕ್ಕಾಗಿ ಒಂದು ಸಮರ್ಪಕ ನಿಯಂತ್ರಣವಾಗಿರುತ್ತದೆ ಎಂಬ ವಾದವನ್ನು ಮುಂದುವರೆಸಿಕೊಂಡುಬಂದಿದ್ದಿತು. ಅಂತಹುದೇ ಲೋಪದೋಷಗಳನ್ನು ಹಿಂದಿನ ಸಾಲುಗಳಲ್ಲಿ ಸ್ಪಷ್ಟಪಡಿಸಲಾಗಿದ್ದು, ನಿರ್ದಿಷ್ಟಪಡಿಸಿರದ ಅಪ್ರಧಾನ ಖನಿಜಗಳಿಗೆ ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳ ನಿಯಮ 42(1)ರ ಅನುವುಗಳು ಅನ್ವಯಗೊಳ್ಳುವುದಿಲ್ಲ ಹಾಗೂ ಉತ್ಪಾದನೆಯ ಪರಿಮಾಣವನ್ನು ಪತ್ತೆಹಚ್ಚುವ ಸಲುವಾಗಿ ಹಾಗೂ ಅದರ ಮೇಲಿನ ರಾಜಧನವನ್ನು ನಿರ್ಧಾರಣೆ ಮಾಡುವ ಸಲುವಾಗಿ ಇಲಾಖೆಯು, ಅದರ ವಾರ್ಷಿಕ ನಿರ್ಧಾರಣೆಯ ಸಮಯದಲ್ಲಿ ನಡೆಸುತ್ತಿರುವ ಹೊಂಡಗಳ ಅಳತೆಯ ವೈಜ್ಞಾನಿಕ ಪದ್ಧತಿಯು ಒಂದು ಸಮರ್ಪಕ ನಿಯಂತ್ರಣವಾಗಿದೆ ಎಂಬ ತನ್ನ ವಾದವನ್ನು ಇಲಾಖೆಯು, ಅವಿರತವಾಗಿ ಮುಂದುವರೆಸಿಕೊಂಡುಬಂದಿದೆ.

ಲೆಕ್ಕಪರಿಶೋಧನೆಯು, ಈ ಪ್ರಕರಣಗಳನ್ನು ಮಾರ್ಚ್ ಮತ್ತು ಮೇ 2016ರಲ್ಲಿ ಸರ್ಕಾರದ ಗಮನಕ್ಕೆ ಹಾಗೂ ಇಲಾಖೆಯ ಗಮನಕ್ಕೆ ತಂದಾಗ, ವಿಷಯವನ್ನು ನಿರ್ದಿಷ್ಟಪಡಿಸಿರದ ಅಪ್ರಧಾನ ಖನಿಜಗಳ ಸಾಗಣೆಗೆ ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳು, 1994ರ ನಿಯಮ 42(1) ಅನ್ವಯಗೊಳ್ಳುವುದರ ಬಗ್ಗೆ ಸ್ಪಷ್ಟನೆಯನ್ನು ಕೋರಿ ಕಾನೂನು ಇಲಾಖೆಗೆ ಕಳುಹಿಸಲಾಗಿದೆ ಎಂಬುದಾಗಿ ಇಲಾಖೆಯು (ಜುಲೈ 2016) ತಿಳಿಸಿತು. ಸರ್ಕಾರದಿಂದ ಉತ್ತರವನ್ನು ಹಾಗೂ ಕಾನೂನು ಇಲಾಖೆಯ ಅಭಿಪ್ರಾಯವನ್ನು ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

## 6.5 ಪರಿಷ್ಕರಣಾ–ಪೂರ್ವ ದರಗಳನ್ನು ಅನ್ವಯಿಸಿದ ಕಾರಣ ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

ಗುತ್ತಿಗೆ ಪ್ರದೇಶದಿಂದ ಹೊರತೆಗೆಯಲಾದಂತಹ ಅಥವಾ ಬಳಸಿಕೊಂಡಂತಹ ಯಾವುದೇ ಖನಿಜಗಳಿಗೆ ಸಂಬಂಧಿಸಿದಂತೆ ಆ ಸಮಯಕ್ಕೆ ಅಧಿನಿಯಮದ ಎರಡನೆಯ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಿರುವ ದರಗಳಲ್ಲಿ ಓರ್ವ ಗುತ್ತಿಗೆದಾರರ ಮೇಲೆ ರಾಜಧನವನ್ನು ವಿಧಿಸಲು ಗಣಿಗಳು ಮತ್ತು ಖನಿಜಗಳು (ವಿಕಸನ ಮತ್ತು ನಿಯಂತ್ರಣ) ಅಧಿನಿಯಮ, 1957ರ ಪರಿಚ್ಛೇದ 9(2) ಅನುವುಗೊಳಿಸಿದೆ. 1 ಸೆಪ್ಟಂಬರ್ 2014ರಿಂದ ಜಾರಿಗೆ ಬಂದಂತೆ, ಕಬ್ಬಿಣದ ಅದಿರು ಹಾಗೂ ಮ್ಯಾಂಗನೀಸ್ ಅದಿರಿನ ಮೇಲೆ ವಿಧಿಸಬೇಕಾದಂತಹ ರಾಜಧನವನ್ನು ಶೇಕಡ 10 ಹಾಗೂ ಶೇಕಡಾ 4.2ರಿಂದ ಮಾರಾಟದ ಸಮಯದಲ್ಲಿ ಇರುವಂತಹ ಖನಿಜಗಳ ಬೆಲೆಯ ಮೇಲೆ (ಅಡ್‌ವೆಲರಂ[5]) ಅನುಕ್ರಮವಾಗಿ ಶೇಕಡ 15 ಹಾಗೂ ಶೇಕಡಾ 5ಕ್ಕೆ ಪರಿಷ್ಕರಿಸಲಾಯಿತು.

ಮೇಲ್ವಿಚಾರಣಾ ಸಮಿತಿಯ[6] ಲೆಕ್ಕಪತ್ರಗಳನ್ನು ನವಂಬರ್ ಮತ್ತು ಡಿಸೆಂಬರ್ 2015ರ ಅವಧಿಯಲ್ಲಿ ಪರಿಶೀಲನೆ ಮಾಡುವ ವೇಳೆಯಲ್ಲಿ, ಇ–ಹರಾಜಿನ ಮೂಲಕ ಮಾರಾಟ ಮಾಡಲಾದಂತಹ ಖನಿಜಗಳ ಮೇಲೆ ರಾಜಧನವನ್ನು 31 ಆಗಸ್ಟ್ 2014ರವರೆವಿಗೂ ಪರಿಷ್ಕರಣಾ–ಪೂರ್ವ ದರಗಳಲ್ಲಿ ಹಾಗೂ ಆ ದಿನಾಂಕದ ನಂತರದ ಮಾರಾಟಗಳ ಮೇಲೆ ಪರಿಷ್ಕೃತ ದರಗಳಲ್ಲಿ ವಸೂಲಾತಿ ಮಾಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮೇಲೆ ತಿಳಿಸಲಾದಂತಹ ಅನುವುಗಳ ಅನುಸಾರ ರಾಜಧನದ ದರಗಳನ್ನು ಅನ್ವಯಿಸುವ ಸಲುವಾಗಿನ ಆಧಾರವು ಖನಿಜವನ್ನು ಹೊರತೆಗೆದ ದಿನಾಂಕವಾಗಿದ್ದು, ನೀಡಲಾಗಿರುವ ಟ್ರಿಪ್ಪು

[5] ಭಾರತ ಸರ್ಕಾರ, ಗಣಿಗಳ ಮಂತ್ರಾಲಯ ಅಧಿಸೂಚನೆ ಸಂಖ್ಯೆ 63(ಇ) ದಿನಾಂಕ 1 ಸೆಪ್ಟಂಬರ್ 2014.

[6] ಮೇಲ್ವಿಚಾರಣಾ ಸಮಿತಿಯನ್ನು, ಪ್ರಸ್ತುತ ಇರುವಂತಹ ಕಬ್ಬಿಣದ ಅದಿರಿನ ದಾಸ್ತಾನನ್ನು ಇ–ಹರಾಜಿನ ಮೂಲಕ ಮಾರಾಟ ಮಾಡುವುದಕ್ಕೆ ಸಂಬಂಧಿತ ಅಂಶಗಳನ್ನು ವ್ಯವಹರಿಸುವುದಕ್ಕಾಗಿ, ಅದರ ಸಾಗಾಣಿಕೆ ಹಾಗೂ ಕಬ್ಬಿಣದ ಅದಿರಿನ ಮಾರಾಟದಿಂದ ಬರುವಂತಹ ಪ್ರತಿಫಲದ ಮೊತ್ತವನ್ನು ಲೆಕ್ಕ ಇಡುವುದಕ್ಕಾಗಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ 2 ಸೆಪ್ಟಂಬರ್ 2011 ಹಾಗೂ 23 ಸೆಪ್ಟಂಬರ್ 2011ರ ಆದೇಶಗಳ ಅಡಿಯಲ್ಲಿ ರಚಿಸಲಾಯಿತು. ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಿಗೆ ಸಂಬಂಧಿತ ಗಣಿಗಳಿಂದ ಹೊರತೆಗೆಯಲಾಗುವ ಕಬ್ಬಿಣ ಹಾಗೂ ಮ್ಯಾಂಗನೀಸ್ ಅದಿರಿನ ಮಾರಾಟವನ್ನು ಸಮಿತಿಯು ಮಾಡುವ ಇ–ಹರಾಜಿನ ಮೂಲಕ ಮಾಡಲಾಗುವುದು. ಈ ಪ್ರಕ್ರಿಯೆಯಲ್ಲಿ, ಸರ್ಕಾರಕ್ಕೆ ಬರಬೇಕಾದ ರಾಜಧನ ಮತ್ತಿತರ ವಿಧಿಸುವಿಕೆಗಳನ್ನು ಸಮಿತಿಯು ಯಶಸ್ವೀ ಸವಾಲುದಾರರುಗಳಿಂದ ಸಂಗ್ರಹಿಸುವುದು ಹಾಗೂ ಸಂಬಂಧಿತ ಇಲಾಖೆಗಳಿಗೆ ಪಾವತಿಸುವುದು.

ಶೀಟುಗಳಿಂದ[7] ಕಂಡುಬರುವಂತೆ ವಾಸ್ತವಿಕವಾಗಿ ಖನಿಜಗಳನ್ನು ಹೊರತೆಗೆದಂತಹ ದಿನಾಂಕವು, ಆ ದಿನಾಂಕದ ನಂತರದ ದಿನಾಂಕವಾಗಿದ್ದಲ್ಲಿ, 1 ಸೆಪ್ಟಂಬರ್ 2014ಕ್ಕೆ ಮುಂಚಿತವಾಗಿ ಮಾರಾಟ ಮಾಡಲಾದಂತಹ ಖನಿಜಗಳಿಗೂ ಪರಿಷ್ಕೃತ ದರಗಳನ್ನು ಅನ್ವಯಗೊಳಿಸಬೇಕಿದ್ದಿತು.

2013–14 ಹಾಗೂ 2014–15 ಸಾಲುಗಳಲ್ಲಿ ನಡೆಸಲಾದಂತಹ ಕಬ್ಬಿಣದ ಅದಿರಿನ ಇ–ಹರಾಜುಗಳಿಗೆ ಸಂಬಂಧಿಸಿದಂತೆ, ಖನಿಜವನ್ನು 1 ಸೆಪ್ಟಂಬರ್ 2014ರನಂತರ ಹೊರತೆಗೆಯಲಾಯಿತಾದರೂ, ₹ 374.62 ಕೋಟಿ ಮೌಲ್ಯದ 16,64,248.01 ಮೆಟ್ರಿಕ್ ಟನ್ನುಗಳಷ್ಟು ಕಬ್ಬಿಣದ ಅದಿರಿನ ಮೇಲೆ ಶೇಕಡಾ 15ರ ಪರಿಷ್ಕೃತ ದರಕ್ಕೆ ಪ್ರತಿಯಾಗಿ ಶೇಕಡಾ 10ರ ದರದಲ್ಲಿ ರಾಜಧನವನ್ನು ವಿಧಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ₹ 18.73 ಕೋಟಿ ಮೊತ್ತದಷ್ಟು ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಿತು.

ಅದೇ ರೀತಿಯಲ್ಲಿ, 2014–15 ಸಾಲಿಗೆ ಮ್ಯಾಂಗನೀಸ್ ಅದಿರಿನ ಇ–ಹರಾಜುಗಳಿಗೆ ಸಂಬಂಧಿಸಿದಂತೆ, ₹ 6.06 ಕೋಟಿ ಮೌಲ್ಯದ 9,424 ಮೆಟ್ರಿಕ್ ಟನ್ನುಗಳಷ್ಟು ಮ್ಯಾಂಗನೀಸ್ ಅದಿರಿನ ಮೇಲೆ ಪರಿಷ್ಕೃತ ದರ ಶೇಕಡಾ 5ಕ್ಕೆ ಪ್ರತಿಯಾಗಿ ಶೇಕಡಾ 4.2ರ ದರದಲ್ಲಿ ವಿಧಿಸಲಾಗಿದ್ದಿತು ಎಂಬುದನ್ನು ಗಮನಿಸಲಾಯಿತು. ತತ್ಪರಿಣಾಮವಾಗಿ, ₹ 4.85 ಲಕ್ಷ ಮೊತ್ತದಷ್ಟು ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಿತು.

1 ಸೆಪ್ಟಂಬರ್ 2014ರ ನಂತರ ಸಾಗಾಣಿಕೆ ಮಾಡಲಾದಂತಹ ಖನಿಜಗಳ ಮೇಲೆ ರಾಜಧನದ ವ್ಯತ್ಯಾಸದ ಮೊತ್ತವನ್ನು ವಸೂಲಾತಿ ಮಾಡುವಂತೆ ಗಣಿ ಮತ್ತು ಭೂವಿಜ್ಞಾನಗಳ ಇಲಾಖೆಯು ಮೇಲ್ವಿಚಾರಣಾ ಸಮಿತಿಗೆ ಸಲಹೆಯನ್ನು ನೀಡಬಹುದಿದ್ದಿತು.

ಈ ನಿಟ್ಟಿನಲ್ಲಿ, ದರಗಳ ಬದಲಾವಣೆಯ ಕಾರಣ ಟ್ರಿಪ್ಪು ಶೀಟುಗಳನ್ನು ನೀಡುವ ಸಮಯದಲ್ಲಿ ರಾಜಧನದ ಯಾವುದಾದರೂ ಹೆಚ್ಚುವರಿ ವಿಧಿಸುವಿಕೆಗಳು ಉದ್ಭವಿಸಿದಲ್ಲಿ, ಅದನ್ನು ವಿಧಿಸುವ ಹಾಗೂ ವಸೂಲಾತಿ ಮಾಡುವ ರೀತಿಯಲ್ಲಿ ಇಲಾಖೆಯ **"ಸಮಗ್ರ ಗುತ್ತಿಗೆ ನಿರ್ವಹಣೆ"** ತಂತ್ರಾಂಶ ಅನ್ವಯದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಬೇಕೆಂಬುದಾಗಿಯೂ ಶಿಫಾರಸ್ಸು ಮಾಡಲಾಗುತ್ತಿದೆ.

ಈ ಪ್ರಕರಣಗಳನ್ನು ಲೆಕ್ಕಪರಿಶೋಧನೆಯು ಮಾರ್ಚ್ ಹಾಗೂ ಏಪ್ರಿಲ್ 2016ರಲ್ಲಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರವರು ಹಾಗೂ ಸರ್ಕಾರದ ಗಮನಕ್ಕೆ ತಂದಾಗ, ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರವರಿಂದ ವಿಷಯದ ಬಗ್ಗೆ ಸ್ಪಷ್ಟೀಕರಣವನ್ನು ಪಡೆದನಂತರ ಮೇಲ್ವಿಚಾರಣಾ ಸಮಿತಿಯು ₹ 17.99 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದೆ ಎಂಬುದಾಗಿ ಇಲಾಖೆಯು ಉತ್ತರಿಸಿತು. ಮುಂದಿನ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

## 6.6 ರಾಜಧನದ ದರಗಳನ್ನು ತಪ್ಪಾಗಿ ಅಳವಡಿಸಿಕೊಂಡ ಕಾರಣ ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ಕಡಿದುಕೊಂಡಿದ್ದುದು.

ಕರ್ನಾಟಕ ಅಪ್ರಧಾನ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 36ರ ಅನುಸಾರ ಕಲ್ಲು ಗಣಿಗಾರಿಕೆ ಗುತ್ತಿಗೆ ಅಥವಾ ಪರವಾನಿಗೆಯನ್ನು ಹೊಂದಿರುವವರು ಅಥವಾ ಅವರ ಪ್ರತಿನಿಧಿಗಳು, ವ್ಯವಸ್ಥಾಪಕರು, ಉದ್ಯೋಗಿಗಳು ಅಥವಾ ಗುತ್ತಿಗೆದಾರರು ಹೊರತೆಗೆದಂತಹ ಅಥವಾ ಬಳಸಿಕೊಂಡಂತಹ ಅಪ್ರಧಾನ ಖನಿಜದ ಮೇಲೆ ರಾಜಧನವನ್ನು ಪಾವತಿಸತಕ್ಕದ್ದು. ಮುರ್ರಂ, ಸಾಮಾನ್ಯ ಮರಳು ಹಾಗೂ ಕಟ್ಟಡ ಕಲ್ಲುಗಳಿಗಾಗಿ ಷೆಡ್ಯೂಲು IIರ ಅಡಿಯಲ್ಲಿನ ದರಗಳನ್ನು 5 ಮಾರ್ಚ್ 2014ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿದ್ದಿತು, ಅಂತಹ ಪರಿಷ್ಕೃತ ದರಗಳು ಘನ ಮೀಟರು ಒಂದಕ್ಕೆ ಅನುಕ್ರಮವಾಗಿ ₹ 30/–, ₹ 103/– ಮತ್ತು ₹ 108/– ಆಗಿದ್ದವು. ಗಣಿಗಳು ಮತ್ತು ಭೂವಿಜ್ಞಾನಗಳ ಇಲಾಖೆಯ ನಿರ್ದೇಶಕರವರು ಪರಿಷ್ಕೃತ ದರಗಳನ್ನು ಕ್ಷೇತ್ರ ಕಚೇರಿಗಳಿಗೆ ಸುತ್ತೋಲೆಯ ಮೂಲಕ ತಿಳಿಸಿದ್ದರು (13 ಮಾರ್ಚ್ 2014).

ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯ ಸುತ್ತೋಲೆ ನಿರ್ದೇಶನಗಳ (ಡಿಸೆಂಬರ್ 2007) ಅನುಸಾರ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು, ಅವುಗಳು ಕಾರ್ಯಗತಗೊಳಿಸುವಂತಹ ಕಾಮಗಾರಿಗಳ ಮೇಲೆ ಗುತ್ತಿಗೆದಾರರರುಗಳ ಬಿಲ್ಲುಗಳಿಂದ, ಅವರುಗಳು ರಾಜಧನವನ್ನು ಪಾವತಿಸಿರುವ ಬಗ್ಗೆ ಸಾಕ್ಷ್ಯಾಧಾರಗಳನ್ನು ಒದಗಿಸುವಲ್ಲಿ ವಿಫಲರಾದಲ್ಲಿ, ರಾಜಧನವನ್ನು ಕಡಿದುಕೊಳ್ಳತಕ್ಕದ್ದು.

ಬಳ್ಳಾರಿಯ ಹಿರಿಯ ಭೂವಿಜ್ಞಾನಿಯವರ ಕಚೇರಿಯ ದಾಖಲೆಗಳನ್ನು ಫೆಬ್ರವರಿ 2016ರಲ್ಲಿ ಪರೀಕ್ಷಾ–ಪರಿಶೀಲನೆ ಮಾಡುವ ವೇಳೆಯಲ್ಲಿ, ರಾಜಧನವನ್ನು ಕಡಿದುಕೊಂಡಿದ್ದುದರ ಮಾಸಿಕ ತಃಖ್ತೆಗಳನ್ನು ಕಾರ್ಯಗತಗೊಳಿಸಲ್ಪಡುವ

[7] ಖನಿಜದ ವಾಸ್ತವಿಕ ಸಾಗಾಣಿಕೆಯ ಸಮಯದಲ್ಲಿ ಟ್ರಿಪ್ಪು ಶೀಟುಗಳನ್ನು ನೀಡಲಾಗುವುದು. ಪ್ರತಿಯೊಂದು ಟ್ರಿಪ್ಪು ಶೀಟು ಒಂದು ವಾಹನದ ಒಂದು ಏಕೈಕ ಟ್ರಿಪ್ಪಿನ ಸಮಯಕ್ಕೆ ಉರ್ಜಿತಗೊಂಡಿರುವುದು.

ಎರಡು ಸಂಸ್ಥೆಗಳು[8] ಸಲ್ಲಿಸಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಸಂಸ್ಥೆಗಳು, ಮಾರ್ಚ್ 2014ರಿಂದ ಮಾರ್ಚ್ 2015ರ ಅವಧಿಯಲ್ಲಿ ವಿವಿಧ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದ ಗುತ್ತಿಗೆದಾರರುಗಳ ಬಿಲ್ಲಿಗಳಿಂದ ಮುರ್ರಂ, ಸಾಮಾನ್ಯ ಮರಳು ಹಾಗೂ ಕಟ್ಟಡ ಕಲ್ಲು, ಇವುಗಳ ಮೇಲೆ ರಾಜಧನವನ್ನು ವಸೂಲಾತಿ ಮಾಡಿದ್ದವು. ಈ ತ:ಖ್ತೆಗಳನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಲಾಗಿ, ರಾಜಧನವನ್ನು (ಘನ ಮೀಟರುಗಳಲ್ಲಿ ಅಳತೆ) 13 ಮಾರ್ಚ್ 2014ರ ಸುತ್ತೋಲೆಯಲ್ಲಿ ನಿರ್ದಿಷ್ಟಪಡಿಸಲಾಗಿದ್ದ ದರಗಳಿಗಿರತ ಕಡಿಮೆ ಪ್ರಮಾಣದಲ್ಲಿ ಕಡಿದುಕೊಳ್ಳಲಾಗಿದ್ದಿತು ಎಂಬುದನ್ನು ತೋರಿಸಿಕೊಟ್ಟಿತು. ಕಡಿದುಕೊಳ್ಳಬೇಕಾಗಿದ್ದ ರಾಜಧನದ ಮೊತ್ತವು ₹ 1.95 ಕೋಟಿ ಆಗಿದ್ದಿತು, ಅದರ ಪೈಕಿ ₹ 0.59 ಲಕ್ಷ ಮೊತ್ತವನ್ನು ಗುತ್ತಿಗೆದಾರರುಗಳ ಪಾವತಿಗಳಿಂದ ಕಡಿದುಕೊಳ್ಳಲಾಗಿದ್ದಿತು, ಇದರಿಂದಾಗಿ ₹ 1.36 ಕೋಟಿ ಮೊತ್ತದಷ್ಟು ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡುವಲ್ಲಿ ಪರಿಣಮಿಸಿದ್ದಿತು.

ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಂಸ್ಥೆಗಳು ಕಡಿದುಕೊಂಡಿದ್ದ ರಾಜಧನದ ತ:ಖ್ತೆಗಳು ಇಲಾಖೆಯಲ್ಲಿ ಲಭ್ಯವಿದ್ದಿತಾದರೂ, ಇಲಾಖೆಗಳು ಕಡಿಮೆ ಪ್ರಮಾಣದಲ್ಲಿ ಕಡಿದುಕೊಳ್ಳಲಾಗಿದ್ದ ರಾಜಧನವನ್ನು ಪತ್ತೆಹಚ್ಚಿರಲಿಲ್ಲ. ತತ್ಪರಿಣಾಮವಾಗಿ, ರಾಜಧನದ ಬಾಕಿ ಮೊತ್ತವನ್ನು ವಸೂಲಾತಿ ಮಾಡುವುದಕ್ಕಾಗಿ ಕ್ರಮವನ್ನು ಕೈಗೊಳ್ಳುವ ಸಲುವಾಗಿ ಈ ಲೋಪದೋಷಗಳನ್ನು ಅಂತಹ ಸಂಸ್ಥೆಗಳ ಗಮನಕ್ಕೆ ತಂದಿರಲಿಲ್ಲ. ಇದು, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು/ಸಂಸ್ಥೆಗಳು ಕಡಿದುಕೊಂಡಿರುವ ರಾಜಧನದ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವ ವ್ಯವಸ್ಥೆಯ ಅನುಪಸ್ಥಿತಿಯನ್ನು ತೋರಿಸುತ್ತದೆ.

ಅಂತಹ ಸಂಸ್ಥೆಗಳು ಕಡಿದುಕೊಳ್ಳುವ ರಾಜಧನದ ಯಾಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಂಸ್ಥೆಗಳು ಸಲ್ಲಿಸುವ ತ:ಖ್ತೆಗಳನ್ನು ಸಂಬಂಧಿತ ಕಚೇರಿಗಳು ಪರಿಶೀಲಿಸಬೇಕು ಎಂಬುದಾಗಿ ಈ ಮೂಲಕ ಶಿಫಾರಸ್ಸು ಮಾಡಲಾಗುತ್ತಿದೆ.

ಇದರ ಬಗ್ಗೆ ಲೆಕ್ಕಪರಿಶೋಧನೆಯು ಫೆಬ್ರವರಿ 2016ರಲ್ಲಿ ಸ್ಪಷ್ಟಪಡಿಸಿದನಂತರ, ಈ ಪ್ರಕರಣಗಳನ್ನು ಪರಿಶೀಲಿಸುವುದಾಗಿ ಬಳ್ಳಾರಿಯ ಹಿರಿಯ ಭೂವಿಜ್ಞಾನಿಯವರು ತಿಳಿಸಿದರು (ಫೆಬ್ರವರಿ 2016).

ಈ ಪ್ರಕರಣಗಳನ್ನು ಲೆಕ್ಕಪರಿಶೋಧನೆಯು ಜೂನ್ ಮತ್ತು ಜುಲೈ 2016ರಲ್ಲಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಸರ್ಕಾರದ ಗಮನಕ್ಕೆ ತಂದಿತು. ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

ಬಿ. ಕೆ. ಮುಖರ್ಜಿ

**(ಬಿಜಿತ್ ಕುಮಾರ್ ಮುಖರ್ಜಿ)**

**ಬೆಂಗಳೂರು** **ಮಹಾಲೇಖಾಪಾಲರು**

**ದಿನಾಂಕ** **(ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ)**

**ಕರ್ನಾಟಕ**

**ಮೇಲುಸಹಿ ಮಾಡಲಾಗಿದೆ**

**ನವ ದೆಹಲಿ** **(ಶಶಿ ಕಾಂತ್ ಶರ್ಮ)**

**ದಿನಾಂಕ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

[8] ಮೆ. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ ನಿಯಮಿತ, ಬಳ್ಳಾರಿ ಹಾಗೂ ಮೆ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬಳ್ಳಾರಿ.